**<u>ನಾಲ್ಕನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ</u>**
**<u>ನ್ಯಾಯಾಧೀಶರು, ವಿಜಯಪುರ, ಇವರ ನ್ಯಾಯಾಲಯ</u>**

**ಎಸ್.ಸಿ.ನಂಃ 71/2024**
**ಸಿಡಬ್ಲೂಃ 12**
**ಪಿಡಬ್ಲೂಃ 05**

ಸಾಕ್ಷಿದಾರರ ಹೆಸರು : ಮಹಾದೇವಿ ಬಿರಾದಾರ

ಗಂಡನ ಹೆಸರು : ಬಸಣ್ಣ

ವಯಸ್ಸು : 65 ವರ್ಷ

ಉದ್ಯೋಗ : ಕೂಲಿ

ವಾಸಸ್ಥಳ : ಚಿಕ್ಕಸಿಂದಗಿ.

- - - - -

**<u>ಇಂದು ದಿನಾಂಕ 17.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ</u>**

1) ನಮ್ಮ ತಂದೆ-ತಾಯಿಗೆ ನಾವು ನಾಲ್ಕು ಜನ ಮಕ್ಕಳಿರುತ್ತೇವೆ. ಚಾ.ಸಾ.1 ಭೀಮರಾಯ ಮತ್ತು ಸುಭಾಷಚಂದ್ರ ಇವರು ನನ್ನ ತಮ್ಮಂದಿರು ಇರುತ್ತಾರೆ. ನನಗೆ ಚಿಕ್ಕಸಿಂದಗಿಗೆ ಮದುವೆ ಮಾಡಿಕೊಡಲಾಗಿದ್ದು, ಎಂಟು ವರ್ಷ ಗಂಡನ ಮನೆಯಲ್ಲಿದ್ದು, ನನಗೆ ಮಕ್ಕಳಾಗದ್ದರಿಂದ ಮತ್ತು ನಮ್ಮ ವೈವಾಹಿಕ ಸಂಬಂಧ ಸರಿಯಾಗದ ಕಾರಣ ನಾನು ತವರು ಮನೆಗೆ ಬಂದು ನನ್ನ ಸಹೋದರರೊಂದಿಗೆ ವಾಸವಾಗಿರುತ್ತೇನೆ.

**2)** ಭೀಮರಾಯನಿಗೆ **04** ಜನ ಗಂಡುಮಕ್ಕಳು ಮತ್ತು ಮೃತ ಲಕ್ಷ್ಮಿ **@** ಗುರುಬಾಯಿ ಒಬ್ಬಳೇ ಮಗಳು ಇರುತ್ತಾಳೆ. ಲಕ್ಷ್ಮಿ ಸಾಯುವುದಕ್ಕಿಂತ ಎರಡು ವರ್ಷ ಮೊದಲು ಅವಳನ್ನು **1**ನೇ ಆರೋಪಿಯೊಂದಿಗೆ ಮದುವೆ ಮಾಡಿಕೊಡಲಾಗಿತ್ತು. ಗಂಡನ ಮನೆಯಲ್ಲಿ ಗಂಡ ಮತ್ತು **2**ನೇ ಆರೋಪಿ ಅತ್ತೆ ವಾಸವಾಗಿದ್ದರು. ಅವಳಿಗೆ ಶ್ರೇಯಾ ಎನ್ನುವ ಮಗಳಿದ್ದಳು.

**ಎಸ್.ಸಿ.ನಂಃ 71/2024**
**ಸಿಡಬ್ಲೂಃ 12**
**ಪಿಡಬ್ಲೂಃ 05**

**3)** ಮದುವೆಯಾದ ನಂತರ **2-3** ತಿಂಗಳು ಲಕ್ಷ್ಮಿ ಇವಳು ಗಂಡನ ಮನೆಯಲ್ಲಿ ಚೆನ್ನಾಗಿದ್ದಳು. ಆರೋಪಿ ನಂ.**1** ಮತ್ತು ಅವನ ಸಹೋದರ ಸಿದ್ರಾಮ ಇವರ ನಡುವೆ ವಾಟನಿ ಸಂಬಂಧ ನ್ಯಾಯ ಪಂಚಾಯಿತಿ ಆಗಿರುತ್ತದೆ. ಆ ಕಾಲಕ್ಕೆ ಮೃತ ಲಕ್ಷ್ಮಿ ಇವಳು ಬಾವನಿಗೆ ನೌಕರಿ ಇರುತ್ತದೆ, ಸರಿಯಾಗಿ ಪಾಲು ಮಾಡಿ ಅಂತ ಅಂದಿದ್ದಳಂತೆ. ಆ ಸಮಯದಲ್ಲಿ **1** ಮತ್ತು **2**ನೇ ಆರೋಪಿತರು ಮತ್ತು ಬಾವ ಸಿದ್ರಾಮ ಇವರು ತವರು ಮನೆಗೆ ಯಾಕೆ ಹೇಳಿದಿ ಎಂದು ಹೊಡಿಬಡಿ ಮಾಡಿರುತ್ತಾರೆ ಎಂದು ಮೃತಳು ನನಗೆ ಪೋನ ಮಾಡಿ ತಿಳಿಸಿರುತ್ತಾಳೆ.

**4)** ನಂತರ ನಾನು, ಚಾ.ಸಾ.**1** ಮತ್ತು ಉಳಿದವರು ಕೂಡಿಕೊಂಡು ಅವಳ ಗಂಡನ ಮನೆಗೆ ಹೋಗಿ ಹಿರಿಯರ ಸಮಕ್ಷಮದಲ್ಲಿ ನ್ಯಾಯ ಪಂಚಾಯಿತಿ ಮಾಡಿ, ಮೃತಳನ್ನು ಕರೆದುಕೊಂಡು ಚಿಕ್ಕಸಿಂದಗಿಗೆ ಬಂದಿದ್ದೆವು. ನಂತರ **2-3** ತಿಂಗಳವರೆಗೆ **1**ನೇ ಆರೋಪಿಯು ಚಿಕ್ಕಸಿಂದಗಿಗೆ ಬಂದು - ಹೋಗಿ ಮಾಡುತ್ತಿದ್ದ. ನಂತರ ಲಕ್ಷ್ಮಿಗೆ ಹೆರಿಗೆಯಾಗಿರುತ್ತದೆ. ಆಗ ಗಂಡ ಜಟ್ಟೆಪ್ಪ ಮತ್ತು ನಾದಿನಿ ಲಕ್ಷ್ಮಿ ಇವರು ನಮ್ಮ ಮನೆಗೆ ಬಂದು ಮೃತ ಲಕ್ಷ್ಮಿಯನ್ನು ಕರೆದುಕೊಂಡು ಹೋಗಿರುತ್ತಾರೆ.

**5)** ನಂತರ ಆರೋಪಿತರು ಮೃತ ಲಕ್ಷ್ಮಿಗೆ ಪ್ರತಿದಿನ ತವರು ಮನೆಗೆ ಆಸ್ತಿಯ ಬಗ್ಗೆ ಯಾಕೆ ಹೇಳಿದಿ ಎಂದು ಹೊಡಿಬಡಿ ಮಾಡುತ್ತಿದ್ದರು. ಮುಂದೆ

**ಎಸ್.ಸಿ.ನಂಃ 71/2024**
**ಸಿಡಬ್ಲೂಃ 12**
**ಪಿಡಬ್ಲೂಃ 05**

ಎಲ್ಲಾ ಸರಿ ಆಗಬಹುದು ಎಂದು ಸುಮ್ಮನಿದ್ದೆವು. ದಿನಾಂಕ **16.08.2023**ರಂದು ನಾನು ಮಧ್ಯಾಹ್ನ **04.00** ಘಂಟೆಗೆ ಮೃತ ಲಕ್ಷ್ಮಿ ಮೊಬೈಲಗೆ ಪೋನ ಮಾಡಿರುತ್ತೇನೆ. ಅವಳ ಮೊಬೈಲ ಸ್ವಿಚ್ ಆಫ್ ಆಗಿರುತ್ತದೆ. ಆಗ ನಾನು ಲೋಣಿ ಗ್ರಾಮದ ರೇವಣಸಿದ್ದನಿಗೆ ಪೋನ ಮಾಡಿ ಲಕ್ಷ್ಮಿಗೆ ಪೋನ ಮಾಡಿದರೆ ಅವಳ ಮೊಬೈಲ ಸ್ವಿಚ್ ಆಫ್ ಬರುತ್ತಿದೆ, ಅವಳಿಗೆ ಪೋನ ಕೊಡುವಂತೆ ಹೇಳಿದೆ.

**6)** ಅವನು ಲಕ್ಷ್ಮಿ ಮನೆಗೆ ಹೋಗಿ ಪೋನ ಕೊಟ್ಟು ಮಾತನಾಡಿಸಿರುತ್ತಾನೆ. ಆಗ ಲಕ್ಷ್ಮಿ ಇವಳು ತನ್ನ ಗಂಡ ಮತ್ತು ಅತ್ತೆ ಕಿರಿಕಿರಿ ಮಾಡಿ ಹೊಡಿಬಡಿ ಮಾಡುತ್ತಿದ್ದಾರೆ, ನನ್ನನ್ನು ಕರೆದುಕೊಂಡು ಹೋಗಿರಿ ಎಂದು ಹೇಳಿದಳು. ಅದಕ್ಕೆ ನಾನು ಈಗ ಆಗುವುದಿಲ್ಲ, ನಾಳೆ ಬಂದು ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿ ರೇವಣಸಿದ್ದನಿಗೆ ಇವತ್ತು ಒಂದು ಅವಳನ್ನು ಕಾಯಿ, ನಾಳೆ ಬಂದು ಅವಳನ್ನು ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿದೆ.

**7)** ಅದೇ ದಿನ ಸಾಯಂಕಾಲ **06.00** ಘಂಟೆಗೆ ಝಳಕಿ ಪೋಲೀಸರು ಚಾ.ಸಾ.**10**ರವರಿಗೆ ಪೋನ ಮಾಡಿ ನಿಮ್ಮ ಅಕ್ಕ ಲಕ್ಷ್ಮಿಯನ್ನು ಆರೋಪಿತರು ಕೊಲೆ ಮಾಡಿದ್ದಾರೆ, ಲೋಣಿ ಗ್ರಾಮಕ್ಕೆ ಬರುವಂತೆ ಹೇಳಿರುತ್ತಾರೆ. ಆಗ ಚಾ.ಸಾ.**10** ಸದರಿ ವಿಷಯವನ್ನು ನನಗೆ ತಿಳಿಸಿರುತ್ತಾನೆ.

**ಎಸ್.ಸಿ.ನಂಃ 71/2024**
**ಸಿಡಬ್ಲೂಃ 12**
**ಪಿಡಬ್ಲೂಃ 05**

**8)** ಆಗ ನಾನು ಅವರಿಗೆ ಲಕ್ಷ್ಮಿಗೆ **04.00** ಘಂಟೆಗೆ ಪೋನ ಹಚ್ಚಿದ್ದೆ, ಅವಳು ಕರೆದುಕೊಂಡು ಹೋಗುವಂತೆ ಹೇಳಿದಾಗ ನಾಳೆ ಬಂದು ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿದ್ದು, ರೇವಣಸಿದ್ದನಿಗೆ ಕಾಯುವಂತೆ ಹೇಳಿದ ವಿಷಯ ಮನೆಯವರಿಗೆಲ್ಲ ತಿಳಿಸಿದೆ. ಅದೇ ದಿನ ರಾತ್ರಿ **08.00** ಘಂಟೆಗೆ ನಾವು ಮನೆಯವರೆಲ್ಲ ಸೇರಿಕೊಂಡು ಲೋಣಿ ಗ್ರಾಮದ ಆರೋಪಿತರ ಮನೆಗೆ ಹೋದಾಗ ಪಡಸಾಲೆಯಲ್ಲಿ ಲಕ್ಷ್ಮಿಯ ಶವ ಬಿದ್ದಿತ್ತು. ತಲೆಗೆ ಬಲವಾಗಿ ಪೆಟ್ಟಾಗಿ ರಕ್ತ ಸೋರಿತ್ತು. ಆ ಕಾಲಕ್ಕೆ ಆರೋಪಿತರು ಮನೆಯಲ್ಲಿರಲಿಲ್ಲ. ಅವರು ಊರು ಬಿಟ್ಟುಹೋದ ವಿಷಯ ಗೊತ್ತಾಯಿತು.

**9)** ಇದರ ಬಗ್ಗೆ ಚಾ.ಸಾ.**1** ದೂರು ಕೊಟ್ಟಿರುತ್ತಾನೆ. ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿಃ</u>**

ಆರೋಪಿತರ ಪರ ವಕೀಲರು ಕಲಂ **231(2)** ಸಿ.ಆರ್.ಪಿ.ಸಿ. ಮತ್ತು ಕಲಂ **254(3)** ಬಿ.ಎನ್.ಎಸ್.ಎಸ್. ಅಡಿಯಲ್ಲಿ ಅರ್ಜಿ ಹಾಕಿಕೊಂಡು ಪಾಟಿ ಸವಾಲಿಗೆ ಸಮಯ ಕೋರಿರುತ್ತಾರೆ. ಕಾರಣ ಪಾಟಿ ಸವಾಲನ್ನು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**
**ಓ.ಹೇ.ಕೇ. ಸರಿ ಅದೆ.**

4ನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ವಿಜಯಪುರ.